## ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:-* ಶ್ರೀ ಕೆ.ಸಿ.ಸಂಗಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ-32 ರಡಿ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಸ್ವತಂತ್ರ ಪ್ರಭಾರದಲ್ಲಿರಿಸುವ ಬಗ್ಗೆ

*ಓದಲಾಗಿದೆ*

*1.* ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 144 ಇಎನ್‌ಕ್ಯೂ 2016, ದಿನಾಂಕ:29.11.2016

*2.* ಶ್ರೀ ಕೆ.ಸಿ.ಸಂಗಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ಮನವಿ ದಿನಾಂಕ:09.04.2020

*3.* ಸಿ.ಆ.ಸು ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 12 ಸೇಇವಿ 2003, ದಿನಾಂಕ:11.09.2003

<u>*ಪ್ರಸ್ತಾವನೆ:-*</u>

2009-10 ನೇ ಸಾಲಿನಲ್ಲಿ ಹುಣಸೆಕಟ್ಟೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ದುರಸ್ತಿ ಕಾಮಗಾರಿ ಮಂಜೂರಾಗಿದ್ದು, ಅನುದಾನ ಲಭ್ಯವಿಲ್ಲದ ಕಾರಣ ಅಂದಾಜು ಪಟ್ಟಿ ರದ್ದುಪಡಿಸಿ ನಂತರ ಅದೇ ಕಾಮಗಾರಿಗೆ 2013-14 ನೇ ಸಾಲಿನಲ್ಲಿ ಕಾಮಗಾರಿಯ ಅಂದಾಜು ವೆಚ್ಚ ರೂ.1.00 ಲಕ್ಷ ಎಂದು ಕ್ರಿಯಾ ಯೋಜನೆ ಮಾಡಿ, 2009-10 ನೇ ಸಾಲಿನಲ್ಲಿ ನಡೆದ ಕಾಮಗಾರಿಗೆ 2014-15 ನೇ ಸಾಲಿನಲ್ಲಿ ದುರಸ್ತಿ ಕಾಮಗಾರಿ ನಡೆದಿದೆಯೆಂದು ನಮೂದಿಸಿ ಹಣ ಪಾವತಿಸಿದ್ದು, 2013-14 ನೇ ಸಾಲಿನಲ್ಲಿ ಯಾವುದೇ ಕಾಮಗಾರಿ ನಿರ್ವಹಣೆ ಮಾಡದೇ ಇದ್ದರೂ ಹಣ ಪಾವತಿಸಿ ದುರುಪಯೋಗಕ್ಕೆ ಕಾರಣರಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಮಾನ್ಯ ಉಪಲೋಕಾಯುಕ್ತರವರು ಲೋಕಾಯುಕ್ತ ಕಾಯ್ದೆ ಕಲಂ 12(3)ರಂತೆ ಸಲ್ಲಿಸಿದ ವರದಿಯನ್ನು ಸರ್ಕಾರವು ಪರಿಶೀಲಿಸಿ ಪ್ರಕರಣದಲ್ಲಿ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯನ್ನು ಕ.ನಾ.ಸೇ. (ವ.ನಿ.ಮೇ.) ನಿಯಮಗಳ ಅಡಿ ನಡೆಸಲು ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರ ಅನುಸಾರ ಉಪ ಲೋಕಾಯುಕ್ತರವರಿಗೆ ಮೇಲೆ ಓದಲಾದ ಕ್ರಮಾಂಕ(1)ರ ದಿನಾಂಕ:29.11.2016ರ ಆದೇಶದಲ್ಲಿ ವಹಿಸಲಾಗಿದೆ.

1. ಶ್ರೀ ಕೆ.ಸಿ.ಸಂಗಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ಉಪವಿಭಾಗ, ಶಿಕಾರಿಪುರ
2. ಶ್ರೀ ಎಂ.ತಿರುಮಲೇಶ್, ಕಾರ್ಯನಿರ್ವಾಹಕ ಅಧಿಕಾರಿ
3. ಶ್ರೀ ಬಿ.ಎನ್.ಪ್ರಭಾಕರ್, ಹಿಂದಿನ ಪ್ರಭಾರಿ ಕಾರ್ಯನಿರ್ವಾಹಕ ಅಧಿಕಾರಿ
4. ಶ್ರೀ ಜಿ.ಲೋಹಿತ್, ಕಾರ್ಯನಿರ್ವಾಹಕ ಅಧಿಕಾರಿ
5. ಶ್ರೀ ವಿಜಯಕುಮಾರ್, ಶಾಖಾಧಿಕಾರಿ

ಸದರಿ ಪ್ರಕರಣವು ಲೋಕಾಯುಕ್ತ ಕಛೇರಿಯಲ್ಲಿ ಇಲಾಖಾ ವಿಚಾರಣೆಗೆ ಬಾಕಿಯಿರುತ್ತದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇಲಾಖಾ ವಿಚಾರಣೆ ಪ್ರಕ್ರಿಯೆ ಪೂರ್ಣಗೊಳಿಸುವ ಬಗ್ಗೆ ಹೊರಡಿಸಿರುವ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 12 ಸೇಇವಿ 2003, ದಿನಾಂಕ:11.09.2003ರ ಅನುಸಾರ ಇಲಾಖಾ ವಿಚಾರಣೆಗಳನ್ನು ಒಟ್ಟು 09 ತಿಂಗಳ ಕಾಲಾವಕಾಶವನ್ನು ನಿಗಧಿಪಡಿಸಿರುತ್ತದೆ. ಆದರೆ, ಪ್ರಸಕ್ತ ಪ್ರಕರಣದಲ್ಲಿ ಈಗಾಗಲೇ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಉಪಲೋಕಾಯುಕ್ತರವರಿಗೆ ವಹಿಸಿ ಮೂರುವರೆ ವರ್ಷಗಳು ಗತಿಸಿದ್ದು, ಇನ್ನು ಅಂತಿಮವಾಗಿರುವುದಿಲ್ಲ.

ಶ್ರೀ ಕೆ.ಸಿ.ಸಂಗಪ್ಪ, ಸ.ಕಾ.ಇಂ. ಇವರು ಮೇಲೆ ಓದಲಾದ ಕ್ರಮಾಂಕ(2)ರಲ್ಲಿ ಮನವಿಯಲ್ಲಿ ಈ ಹಿಂದೆ ಶಿಕಾರಿಪುರ ತಾಲ್ಲೂಕಿನ ಹುಣಸೆಕಟ್ಟೆ ಗ್ರಾಮದ ಸರ್ಕಾರಿ ಶಾಲೆಯ ದುರಸ್ಥಿ ಕಾಮಗಾರಿಯಲ್ಲಿ ಕರ್ತವ್ಯ ಲೋಪವೆಸಗಿದ್ದಾರೆಂದು ಸಲ್ಲಿಕೆಯಾಗಿರುವ ದೂರು ಮಾನ್ಯ ಲೋಕಾಯುಕ್ತರಲ್ಲಿ ಸುಮಾರು 4 ವರ್ಷಗಳಿಂದ ಬಾಕಿ ಇರುವುದರಿಂದ ವಿಳಂಬಕ್ಕೆ ತಮ್ಮನ್ನು ಹೊಣೆಗಾರರನ್ನಾಗಿ ಮಾಡದೇ ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಮಾನ್ಯ ಉಚ್ಚನ್ಯಾಯಾಲಯಗಳ ತೀರ್ಪಿನನ್ವಯ ತಮಗೆ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಬಡ್ತಿ ನೀಡಬೇಕೆಂದು ಕೋರಿದ್ದಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಿರುತ್ತದೆ. ಇಲಾಖಾ ವಿಚಾರಣೆಯ ಪ್ರಕರಣಗಳನ್ನು ಒಟ್ಟು 9 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದಾಗಿದೆಯೆಂದು ನಿರ್ದೇಶನವನ್ನು ನೀಡಿರುತ್ತದೆ. ಇದೊಂದು ಮಾರ್ಗದರ್ಶಿಯಾಗಿರುತ್ತದೆ. ಆದಾಗ್ಯೂ, ಈ ಪ್ರಕರಣದಲ್ಲಿ ಇಲಾಖಾ ವಿಚಾರಣೆ ಪೂರ್ಣಗೊಳಿಸುವಲ್ಲಿ ಸುದೀರ್ಘ ವಿಳಂಬವಾಗಿರುತ್ತದೆ. ಅಲ್ಲದೇ, ಆಪಾದಿತ ಅಧಿಕಾರಿಯ ವಿರುದ್ಧದ ಆರೋಪದ ಗಂಭೀರತೆಯ ಬಗ್ಗೆಯೂ ಸಹ ಗಮನಿಸಲಾಗಿದೆ.

ಆದ್ದರಿಂದ, ಪ್ರಕರಣದ ವಿವರಗಳನ್ನು ಪರಿಗಣಿಸಿ ಶ್ರೀ ಕೆ.ಸಿ.ಸಂಗಪ್ಪ, ಸ.ಕಾ.ಇಂ., ಇವರಿಗೆ ಕಡತ ಸಂಖ್ಯೆ: ಗ್ರಾಅಪ 144 ಇಎನ್‌ಕ್ಯೂ 2016ರಲ್ಲಿ ಲೋಕಾಯುಕ್ತ ಕಛೇರಿಯಲ್ಲಿ ಬಾಕಿಯಿರುವ ಇಲಾಖಾ ವಿಚಾರಣೆ ಪ್ರಕರಣದ ಅಂತಿಮ ತೀರ್ಮಾನಕ್ಕೆ ಒಳಪಟ್ಟು ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ-32ರ ಅಡಿಯಲ್ಲಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿರಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ:-

**ಆದೇಶ ಸಂಖ್ಯೆ:ಗ್ರಾಅಪ 203 ಎಸ್‌ಎಸ್‌ಕೆ 19 ಬೆಂಗಳೂರು, ದಿನಾಂಕ: 03.06.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು, ಶ್ರೀ ಕೆ.ಸಿ.ಸಂಗಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರಿಗೆ ಕಡತ ಸಂಖ್ಯೆ: ಗ್ರಾಅಪ 144 ಇಎನ್‌ಕ್ಯೂ 2016ರಲ್ಲಿ ಲೋಕಾಯುಕ್ತ ಕಛೇರಿಯಲ್ಲಿ ಬಾಕಿಯಿರುವ ಇಲಾಖಾ ವಿಚಾರಣೆಯ ಅಂತಿಮ ತೀರ್ಮಾನಕ್ಕೆ ಒಳಪಟ್ಟು ಪುನರ್ ಪರಿಶೀಲಿಸುವ ಷರತ್ತಿನಂತೆ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ-32ರಡಿಯಲ್ಲಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿರಿಸಿ ಆದೇಶಿಸಿದೆ.

ಮುಂದಿನ ಸ್ಥಳನಿಯುಕ್ತಿಗಾಗಿ ಸರ್ಕಾರದಲ್ಲಿ ಕಾರ್ಯವರದಿ ಮಾಡಿಕೊಳ್ಳಲು ಸದರಿಯವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

03/06/2020

(ಸಿ.ಮಂಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

3/6/20

**ಇವರಿಗೆ:**

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
8. ಸಂಬಂಧಿಸಿದ ಅಧಿಕಾರಿಗೆ
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
10. ಗ್ರಾ.ಅ.ಪಂ.ರಾಜ್ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರು
11. ಶಾಖಾ ರಕ್ಷಾ ಕಡತ/ ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.